(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಸುಮಾರು 41, 584 ಎಕರೆಗಳಷ್ಟು ಬರುತ್ತದೆ. ಇವೆರಡನ್ನು ಬಿಟ್ಟರೆ ಸುಮಾರು 38,952 ಎಕರೆ 38 ಗುಂಜೆಯಷ್ಟು ಭೂಮಿಯನ್ನು ಚನ್ನರಾಯಪಟ್ಟಣದ ತಾಲ್ಲೂಕಿನಲ್ಲೇ ಕೊಡುವುದಕ್ಕೆ ಅವಕಾಶವಿದೆ. ಈಗಾಗಲೇ ಈ ಭೂಮಿ ಹಂಚಬೇಕು ಎಂದು ಜಿಲ್ಲಾಧಿಕಾರಿಗಳಿಗೆ ತಿಳಿಸಿ ಆದರಂತೆ ಇಲ್ಲಿ ಜಮೀನು ಹಂಚುತ್ತಿದ್ದಾರೆ.

ಶ್ರೀ ಶರಣಪ್ಪ.—ಮುಳುಗಡೆಯಾದವರಿಗೆ ಕೊಡಲು ತಾವು ಹೇಳಿರುವ ಭೂಮಿಗಳೆಲ್ಲಾ ಒಂದೇ ಸ್ಥಳದಲ್ಲಿರುವುದೋ ಇಲ್ಲವೇ ಬೇರೆ ಬೇರೆ ಜಾಗಗಳಲ್ಲಿರುವುದೋ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಒಂದೇ ಸ್ಥಳದಲ್ಲಿದೆಯೋ ಇಲ್ಲವೋ ನಾನು ಹೇಳಲಾರೆ. ಸಾಮಾನ್ಯವಾಗಿ ಒಂದು ಸ್ಥಳದಲ್ಲಿ ಇಷ್ಟು ಭೂಮಿ ಇರುವುದು ಬಹಳ ಕಡಿಮೆ.

Report on Kannada Language

828. **Sri S. BANGARAPPA** (Sorab).—

Will the Chief Minister be pleased to state :—

(*a*) whether a Committee was constituted by the Government to submit a report on Kannada Language ;

(*b*) if so, whether a report called " Bhasha Varadi " has been submitted to the Government and the action taken on the recommendations made in the Report ?

Sri D. DEVARAJ URS (Chief Minister).—

(*a*) Yes.

(*b*) The Committee has submitted its Report called " Antima Varadi ".

Government have generally approved of the recommendations of the Committee.

ಶ್ರೀ ಎಸ್ ಬಂಗಾರಪ್ಪ.—ಭಾಷಾ ವರದಿಯನ್ನು ಸರಕಾರಕ್ಕೆ ಯಾವಾಗ ಕಳುಹಿಸಿದರು ಮತ್ತು ಆ ವರದಿಯಲ್ಲಿರತಕ್ಕ ಮುಖ್ಯ ಅಂಶಗಳಾವುವು ? ಆ ಅಂಶಗಳನ್ನೆಲ್ಲಾ ಸರಕಾರ ಜಾರಿಗೆ ಕೊಟ್ಟಿದೆಯೇ ?

†ಶ್ರೀ ಡಿ. ದೇವರಾಜ ಅರಸ್.—ಈ ಭಾಷಾ ವರದಿ ಸರಕಾರಕ್ಕೆ 31-3-1970 ರಂದು ಬಂದಿದೆ, ಇದರಲ್ಲಿ ಕೆಲವು ಅಂಶಗಳನ್ನು ಹಂತ ಹಂತವಾಗಿ ಜಾರಿಗೆ ಕೊಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ ಸಮಿತಿ ವರದಿ ಬಂದು ಈಗಾಗಲೇ ಒಂದು ವರ್ಷದ ಮೇಲಾಯಿತು, ಇದನ್ನು ಆದಷ್ಟು ಜಾಗ್ರತೆ ಜಾರಿಗೆ ಕೊಡುತ್ತಾರೆಯೆ? ಇವುಗಳಲ್ಲಿ ಎಷ್ಟು ಶಿಫಾರಸುಗಳನ್ನು ಕಾರ್ಯಗತ ಮಾಡಲಾಗಿದೆ. ಇವನ್ನೆಲ್ಲಾ ಕಾರ್ಯಗತ ಮಾಡದೇ ಇದ್ದರೆ ನಮ್ಮ ರಾಜ್ಯದಲ್ಲಿ ಕನ್ನಡ ರಾಜ್ಯ ಭಾಷೆಯಾಗುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಇದನ್ನು ಏಕೆ ಸಾವಕಾಶ ಮಾಡುತ್ತಿದ್ದಾರೆ ಎನ್ನುವುದನ್ನು ತಿಳಿಸುತ್ತಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಇದರ ವರದಿ 31-3-1970ರಲ್ಲಿ ಬಂದಿದೆ, ಇದರಲ್ಲಿ ಮಾಡಿರುವ ಶಿಫಾರಸುಗಳಲ್ಲಿ ನಾನು ಮೊದಲೇ ಹೇಳಿದ ಹಾಗೆ ಹಂತ ಹಂತವಾಗಿ ಜಾರಿಗೆ ತರುವುದಕ್ಕೆ

ಸರಕಾರ ಕಾರ್ಯಕ್ರಮ ಹಾಕಿಕೊಂಡಿದೆ, ಏಕ್‌ದಂ ಇವನ್ನೆಲ್ಲಾ ಜಾರಿಗೆ ತರಬೇಕು ಎಂದರೆ ವ್ಯಾವಹಾರಿಕವಾಗಿ ಇದು ಸ್ವಲ್ಪ ಕಷ್ಟವಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಕನ್ನಡದ ಬೆರಳಚ್ಚು ಯಂತ್ರಗಳ ಬಗ್ಗೆ ನಿಧಾನವಾಗು ವುದರ ಬಗ್ಗೆ ನಾವು ಹೇಳುತ್ತಿಲ್ಲ. ಇದನ್ನು ಬಿಟ್ಟು ಇದರಲ್ಲಿ ಇನ್ನೂ ಅನೇಕ ಶಿಫಾರಸುಗಳಿವೆ, ಇವನ್ನು ಸರಕಾರ ಕೂಡಲೇ ಜಾರಿಗೆ ತರಬಹುದು. ಆದರೆ ಇದಕ್ಕೆ ಸರಕಾರದ ಅಧಿಕಾರಿಗಳು ಸಾಕಷ್ಟು ಉತ್ಸಾಹ ತೋರಿಸುತ್ತಿಲ್ಲ ಎನ್ನುವುದು ಕೇಳುತ್ತಿದ್ದೇವೆ. ಇತರ ಶಿಫಾರಸುಗಳನ್ನೇಕೆ ಬೇಗ ಜಾರಿಗೆ ತರಬಾರದು ?

ಶ್ರೀ ಡಿ. ದೇವರಾಜ ಅರಸ್,—ಇದರ ಶಿಫಾರಸುಗಳು ಬಂದ ಕೂಡಲೆ ಸರಕಾರದವರು 9-6-72 ರಲ್ಲಿ ಒಂದು ಪ್ರೆಸ್ ನೋಟನ್ನು ಪತ್ರಿಕೆಗಳಲ್ಲಿ ಪ್ರಕಟ ಮಾಡಿದೆ ಅದರಂತೆ ಸರಕಾರ ಕಾರ್ಯಕ್ರಮ ಹಾಕಿಕೊಂಡು ಮಾಡಬೇಕಾಗಿದೆ. ಸರಕಾರ ಬೇಕಂತಲೇ ನಿಧಾನ ಮಾಡುತ್ತಿಲ್ಲ. ಇದರಲ್ಲಿ ಯಾವ ಯಾವ ಶಿಫಾರಸುಗಳನ್ನು ಪರಿಶೀಲನೆ ಮಾಡಬೇಕು ಮತ್ತು ಯಾವುದನ್ನು ಜಾರಿಗೆ ಕೊಡಬಹುದು ಎನ್ನುವ ವಿವರಗಳನ್ನೆಲ್ಲಾ ಪ್ರೆಸ್ ನೋಟಿನಲ್ಲಿ ಕೊಡಲಾಗಿದೆ. ಇವನ್ನೆಲ್ಲಾ ಸರಕಾರ ಪರಿಶೀಲನೆ ಮಾಡುತ್ತಿದೆ. ಇವನ್ನೆಲ್ಲಾ ಪರಿಶೀಲನೆ ಮಾಡಿ ಇವುಗಳಲ್ಲಿ ಯಾವ ಯಾವುದನ್ನು ಜಾರಿಗೆ ಕೊಡಬಹುದೋ ಅಂತಹ ಶಿಫಾರಸುಗಳನ್ನು ಹಂತ ಹಂತವಾಗಿ ಮಾಡಿಕೊಂಡು ಹೋಗು ತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಕನ್ನಡದ ಬೆರಳಚ್ಚು ಯಂತ್ರದ ಬಗ್ಗೆ ನಮಗೆ ಗೊತ್ತಿದೆ ಇದು ನಿಧಾನವಾಗುತ್ತದೆ ಎನ್ನುವುದು ಮತ್ತು ಇದಕ್ಕಾಗಿ ಹೆಚ್ಚಿಗೆ ಹಣವನ್ನು ಸರಕಾರ ಮುಂಜೂರು ಮಾಡಬೇಕಾಗಿ ಬರುತ್ತದೆ. ಆದರೆ ಇದರಲ್ಲಿ ಉಳಿದಿರತಕ್ಕ ಅಂಶಗಳನ್ನು ಆದಷ್ಟು ಶೀಘ್ರವಾಗಿ ಜಾರಿಗೆ ಕೊಡಲು ಸರಕಾರ ಪ್ರಯತ್ನಿಸುತ್ತದೆಯೇ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರ ಅಭಿಪ್ರಾಯ ಸರಕಾರದ ಗಮನದಲ್ಲಿ ಇದೆ ಅದನ್ನು ಉದ್ದೇಶಪೂರ್ವಕವಾಗಿ ನಾವು ತಡ ಮಾಡುತ್ತಿಲ್ಲ. ಆದನ್ನು ಹಂತ ಹಂತವಾಗಿ ಬೇಗ ಜಾರಿಗೆ ಕೊಡಬೇಕೆಂದು ಇದೆ.

Mysore Implements Factory, Hassan

851. **Sri A. G. KODGI** (Baindur).—

Will the Minister for Industries be pleased to state :—

(*a*) the total loss incurred by the Mysore Implements Factory, Hassan, from the date of its inception to this date (Yearly figures may please be furnished) ;

(*b*) the reasons for the heavy loss ;

(*c*) the steps taken by the Government to remedy the same ?

Sri S. M. KRISHNA (Minister for Industries).—

(*a*) *Vide* Statement 'A' appended.

(*b*) *Vide* Statement 'B' appended.

(*c*) *Vide* Statement 'C' appended.